(ಶ್ರೀ ಎಚ್. ಕೆ. ವೀರಣ್ಣಗೌಡ)

ಫೆಬ್ರುವರಿ ತಿಂಗಳಿನ ಲೆಕ್ಕ ಇನ್ನೂ ಬಂದಿಲ್ಲ. ಅದ್ದರಿಂದ ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಚದುರಗಜ ಒಂದಕ್ಕೆ ಎಷ್ಟರಂತೆ ವರ್ಕ್ ಔಟ್ ಆಗಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಕೆಲಸ ಇನ್ನೂ ಪೂರ್ತಿಯಾಗಿಲ್ಲ. ಸಾಮಾನ್ಯವಾಗಿ ಈ ಬಗ್ಗೆ ಚರ್ಚೆ ಬಂದಾಗ, ಸಂಬಂಧಪಟ್ಟ ಆಫೀಸರು ಒಂದು ಚದರ ಅಡಿಗೆ 21 ರೂಪಾಯಿಗಳೆಂದು ಹೇಳಿದ್ದಾರೆ. ಕೆಲವು ಕಡೆ 22-23 ರೂಪಾಯಿಗಳಿವೆಯೆಂದು ನನ್ನ ಕಿವಿಗೆ ಬಿದ್ದಿದೆ. ವಿವರಗಳಿಗೆ ನೋಟೀಸ್ ಕೊಟ್ಟರೆ ಹೇಳುತ್ತೇನೆ.

Sri A. BHEEMAPPA NAIK.—What is the total plinth area of this building ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದಕ್ಕೆ ಸಂಬಂಧಪಟ್ಟ ಪ್ಲಿಂತ್ ಏರಿಯಾ ಮಾಹಿತಿ ನನ್ನಲ್ಲಿಲ್ಲ. ವಿಚಾರಿಸಿ ಹೇಳಬೇಕು.

Sri K. PUTTASWAMY.—May I know whether this amount includes the pending bills ?

Sri H. K. VEERANNA GOWDH.—It does not include them.

Sri K. PUTTASWAMY.—May I know whether the Government is in a position to give the approximate amount of the pending bills ?

Sri H. K. VEERANNA GOWDH.—I would like to verify, before answering.

Sri S. D. KOTHAVALE.—What is the total estimated cost of this building ?

Sri H. K. VEERANNA GOWDH.—This cannot be given exactly, because estimates have been revised a number of times and fresh items of work have been included. There have been so many changes in the design, plan, etc. That to give a correct picture of the whole thing, would take some time.

ಶ್ರೀ ಡಿ. ಟಿ. ಸೀತಾರಾಮರಾವ್.—ಸ್ಯಾಮಿ, 1,42,22,897 ರೂಪಾಯಿಗಳು ಇದುವರೆಗೆ ವೆಚ್ಚವಾಗಿದೆಯೆಂದು ತೋರಿಸಿದ್ದೀರಿ. ಸರ್ಕಾರದವರು ಇನ್ನು ಎಷ್ಟು ಖರ್ಚುಮಾಡಬೇಕೆಂದಿದ್ದಾರೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವು ಸ್ಯಾಕ್ಷನ್ಡ್ ಪ್ಲಾನ್ಸ್ ಮತ್ತು ಎಸ್ಟಿಮೇಟ್ಸ್‌ಗಳ ಕೆಲಸ ನಡೆಯುತ್ತಿದೆ. ಹೊಸದಾಗಿ ಕೆಲಸ ಯಾವುದೂ ಸ್ಯಾಕ್ಷನ್ ಮಾಡುತ್ತಾ ಇಲ್ಲ. ಇನ್ನು ಮುಂದೆ ವಿಧಾನ ಸೌಧದ ಕೆಲಸವನ್ನು ನಾರ್ಮಲ್ ಡಿವಿಜನ್‌ಗೆ ಸೇರಿಸಿ ಕೆಲಸ ಮಾಡಬೇಕೆಂದಿದ್ದೇವೆ.

ಶ್ರೀ ಇ. ನಾರಾಯಣಗೌಡ.—1,42,22,897 ಚಿಲ್ಲರೆ ರೂಪಾಯಿಗಳು ಖರ್ಚಾಯಿತು ಎಂದು ಹೇಳಿದ್ದೀರಿ. ಇದರಲ್ಲಿ ಸರ್ಕಾರಿ ಕೆಲಸ ದೇವರ ಕೆಲಸ ಎಂಬುದನ್ನು ಕೆತ್ತನೆ ಮಾಡುವುದಕ್ಕೆ ಎಷ್ಟು ಖರ್ಚಾಯಿತು ಮತ್ತು ಅದನ್ನು ಅಳಿಸುವುದಕ್ಕೆ ಎಷ್ಟು ಖರ್ಚಾಯಿತು?

Sri H. K. VEERANNA GOWDH.—That does not arise out of this question, Sir.

ಶ್ರೀ ಇ. ನಾರಾಯಣಗೌಡ.—ಅದಕ್ಕೆ ಆಗಿರುವ ಖರ್ಚು ಇದರಲ್ಲ ಸೇರಿರಬಹುದಲ್ಲವೆ!

ಶ್ರೀ ಎಚ್. ಕೆ. ವೀರಣ್ಣಗೌಡ.—1957ನೆಯ ಆಗಸ್ಟ್ ತಿಂಗಳುವರೆಗೆ ಆಗಿರುವ ಖರ್ಚು ಇದರಲ್ಲಿ ಸೇರಿದೆ. ಇತಿ ಚೆಗೆ ಆಗಿರುವುದು ಸೇರಿಲ್ಲ. ಆದ್ದರಿಂದ ಸದಸ್ಯರು ಹೇಳುವ ವಿವರವನ್ನು ಕೊಡುವುದಕ್ಕೆ ಆಗುವುದಿಲ್ಲ, ಸ್ವಾಮಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವಿಧಾನಸೌಧದ ಎಲ್ಲಾ ಕೆಲಸವನ್ನೂ ಪೂರೈಸುವುದಕ್ಕೆ ಎಷ್ಟು ಹಣ ಖರ್ಚುಮಾಡಬೇಕೆಂದು ಸರ್ಕಾರದ ಇಚ್ಛೆ ಇದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವು ಪ್ಲಾನ್ಸ್, ಎಸ್ಟಿಮೇಟ್ಸ್ ಸ್ಯಾಕ್ಷನ್ ಆಗಿವೆ. ಆ ಕೆಲಸ ಇನ್ನೂ ನಡೆಯುತ್ತಾ ಇದೆ. ಬರಿಯಕಟ್ಟಡ ಅಲ್ಲದೆ ರಸ್ತೆಮಾಡಿಸುವುದು ದೀಪ ಹಾಕಿಸುವುದು ರಸ್ತೆಗಳಿಗೆ ಟಾರು ಹಾಕುವುದು ಈ ಕೆಲಸ ಎಲ್ಲಾ ಸ್ಯಾಕ್ಷನ್ ಆಗಿ ಕೆಲಸ ನಡೆಯುತ್ತಿದೆ. ವಿಧಾನ ಪೀಠಿಗೆ ಬೇರೆ ಎಸ್ಟಿಮೇಟ್ ಆಗಿದೆ ಅದೆರ್ಲಾ ಆಗ ಬೇಕಾದರೆ ನಿಧಾನವಾಗುತ್ತದೆ.

ಶ್ರೀ ಪರಮೇಶ್ವರಪ್ಪ.—ಕಟ್ಟಡವನ್ನು ಪೂರ್ತಿಯಾಗಿ ಎಷ್ಟು ವರ್ಷಗಳಲ್ಲಿ ಮುಗಿಸಬೇಕೆಂದಿದ್ದೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ವಿಧಾನಸೌಧದಲ್ಲಿ ಇರತಕ್ಕ ಡಿವಿಜನ್ ಬರ್ತ್‌ಫ್ಯಾಮಾಡಿ ಮುಂದೆ ವರ್ಷ ಮಾಡಬೇಕಾದ ಕೆಲಸವನ್ನೆಲ್ಲಾ ನಾರ್ಮಲ್ ಡಿವಿಜನ್ನಿಗೆ ಸೇರಿಸಿಕೊಂಡು ಕೆಲಸಮಾಡಬೇಕೆಂದಿದ್ದೇವೆ.

ಶ್ರೀ ಎಂ. ಸಿ. ನರಸಿಂಹನ್.—ಕಟ್ಟಡದ ಖರ್ಚು ಬಹಳ ದುಬಾರಿಯಾಗಿದೆ ಎಂದು ತಮ್ಮ ಅಭಿಪ್ರಾಯವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಭಿಪ್ರಾಯಕೊಡುವುದಕ್ಕೆ ಅವಕಾಶವಿಲ್ಲ. ಇನ್‌ಫರ್‌ಮೇಷನ್ ಬೇಕಾದರೆ ಕೊಡಬಲ್ಲೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಆ ಮೊತ್ತದಲ್ಲಿ ಆಫೀಸ್ ಫರ್ನಿಚರ್ ಸೇರಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದರಲ್ಲಿ ಆಫೀಸ್ ಫರ್ನಿಚರ್ ಸೇರಿದೆ.

ಶ್ರೀ ಎನ್. ಜಿ. ನರಸಿಂಹೇಗೌಡ —ಈ ವಿಧಾನ ಸೌಧದ ಖರ್ಚು ಅನ್ಯಾಯವಾಗಿ ಜಾಸ್ತಿಯಾಗಿದೆ ಎಂದು ಹೊರಗಿನವರು ಮತ್ತು ಅನೇಕ ಸದಸ್ಯರು ಹೇಳುತ್ತಾ ಇರುವುದರಿಂದ ಈ ಕಟ್ಟಡಕ್ಕೆ ಶೇಕಡ 20 ದುಡ್ಡು ಜಾಸ್ತಿಕೊಟ್ಟರೆ ಹಣ ಉಳಿಸುವ ದೃಷ್ಟಿಯಿಂದ ಕಟ್ಟಡವನ್ನು ಖರೀದಿಗೆ ಕೊಡುತ್ತೀರಾ?

Mr. DEPUTY SPEAKER.—That question does not arise.

Sri C. M. ARUMUGHAM.—I am not putting my question 510.

Repairs to Jannur Tank in Chamarajanagar Taluk.

Q.—657. Sri U. M. MADAPPA (Chamarajanagar).—

Will the Government be pleased to state :—

(*a*) whether an estimate has been

prepared for repairs to Jannur Tank in Chamarajanagar taluk;

(*b*) the estimated expenditure thereof;

(*c*) the date of preparation of the above estimate;

(*d*) whether this estimated expenditure has been provided for in the State Budget;

(*e*) if not, the reasons for its omission?

A.—Sri H. K. VEERANNA GOWDH (Minister for Public Works).—

(*a*) Yes.

(*b*) Rs. 11,950.

(*c*) 1-11-1954.

(*d*) No.

(*e*) The tank is in what was formerly an inam village. The village has since vested in Government and the question of sanctioning the estimate will now be considered.

Sri U. M. MADAPPA.—May I know the date on which the Government may sanction the estimate?

Sri H. K. VEERANNA GOWDH.—I must wait for the papers to come before me.

Sri U. M. MADAPPA.—May I know in what stage it is pending and in which office it is pending?

Sri H. K. VEERANNA GOWDH.—There are very many stages for a paper to be pending. It may be pending in the Secretariat or in the Chief Engineer's Office or in the Superintending Engineer's Office. I must get the information.

Sri U. M. MADAPPA.—Then I say the Hon'ble Minister has not been able to get information from the concerned office hitherto?

Sri H. K. VEERANNA GOWDH.—I do not understand the Hon'ble Member's question. Please let me know what you want.

ಶ್ರೀ ಯು. ಎಂ. ಮಾದಪ್ಪ.—ಎಸ್ಟಿಮೇಟು ಯಾವ ಆಫೀಸಿನಲ್ಲಿದೆ? ಇಂಥಾ ಕಡೆ ಇದೆಯೆಂದು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲವೇ?

Sri H. K. VEERANNA GOWDH.—All the information that the Hon'ble member has asked for is given, as to the office in which it is pending, I must get information.

Sri U. M. MADAPPA.—I have not asked for it. ಈ ಎಸ್ಟಿಮೇಟನ್ನು ಸ್ಯಾಂಕ್ಷನ್ ಮಾಡಬೇಕಾದರೆ ಯಾವ ಆಫೀಸಿನಿಂದ ಇಂಫರ್ ಮೇಷನ್ ತರಿಸಿಕೊಳ್ಳುತ್ತೀರಿ? ಈ ಪ್ರಶ್ನೆಗೆ ಉತ್ತರ ಕೊಡಬೇಕಾದರೆ ತಮಗೆ ಸಂಬಂಧ ಪಟ್ಟ ಎಲ್ಲಾ ಅಂಕ ಅಂಶಗಳು ಬಂದಿರುವುದಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಏನೇನು ಕೇಳಿದ್ದೀರೋ ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಬಾಕಿ ವಿವರಗಳು ಬೇಕಾದರೆ ಫೈಲಿನಲ್ಲಿ ಇದ್ದರೆ ಹೇಳುತ್ತೇನೆ.

Sri U. M. MADAPPA.—Then I need not put supplementaries on this question.

Mr. DEPUTY SPEAKER.—It is a matter of detail.

Sri U. M. MADAPPA.—This is a supplementary question for which I expect an answer.

Mr. DEPUTY SPEAKER.—The Hon'ble Minister wants time to answer the question about the office in which it is pending.

ಶ್ರೀ ಬಿ. ರಾಚಯ್ಯ.—ಮೈನರ್ ಇರಿಗೇಷನ್ ಯೋಜನೆಯ ಪ್ರಕಾರ ಈಗಾಗಲೇ ಈ ಕೆರೆಯ ರಿಪೇರಿ ಮಾಡುತ್ತಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇರಬಹುದು.

ಶ್ರೀ ಎಂ. ಸಿ. ನರಸಿಂಹನ್.—ಬಡ್ಜೆಟ್‌ನಲ್ಲಿ ಇದಕ್ಕೆ ಹಣ ಒದಗಿಸಿದೆ ಇದ್ದರೂ ಇದರ ಕೆಲಸವನ್ನು ತೆಗೆದು ಕೊಳ್ಳಬಹುದೇ?

Sri H. K. VEERANNA GOWDH.—Out of the lumpsum grant some other works are taken.

ಶ್ರೀ ಎಂ. ಸಿ. ನರಸಿಂಹನ್.—ಒಂದು ಕೆಲಸ ತೆಗೆದುಕೊಳ್ಳಬೇಕಾದರೆ ಅದು ಮೊದಲು ಸ್ಯಾಂಕ್ಷನ್ ಆಗಿರಬೇಕೇ? ಅಥವಾ ಯಾರಾದರೂ ಹೇಳಿದ್ದರ ಮೇಲೆ ಅದನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಡಿಪಾರ್ಟ್‌ಮೆಂಟಲ್ ಆಫೀಸರ್ ಇಕ್ವೆಸ್ಟಿಗೇಟ್ ಮಾಡಿ ಎಲ್ಲೆಲ್ಲಿ ಅವಶ್ಯಕತೆ ಇದೆಯೆಂದು ಕಂಡುಬರುತ್ತದೋ ಅಲ್ಲೆಲ್ಲಾ ತೆಗೆದುಕೊಳ್ಳುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಈ ಕೆರೆಯ ಕೆಲಸವನ್ನು ಮೈನರ್ ಇರಿಗೇಷನ್ ಸ್ಕೀಮಿನಲ್ಲಿ ತೆಗೆದು ಕೊಂಡಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ತೆಗೆದುಕೊಂಡಿರುವ ಎಲ್ಲಾ ಕೆಲಸಗಳೂ ನನ್ನ ಗಮನಕ್ಕೆ ಬರುವುದಿಲ್ಲ. ಅದನ್ನು ತೆಗೆದುಕೊಂಡಿರಬಹುದು.

ಶ್ರೀ ಯು. ಎಂ. ಮಾದಪ್ಪ.—ಫೀಸ್‌ವರ್ಕಿನ ಮೇಲೆ ಸ್ಯಾಂಕ್ಷನ್ ಆಗಿರುವುದರಿಂದ ಅಲ್ಲಿ ಕೆಲಸ ಮಾಡುವ ಕೂಲಿಗಾರರಿಗೆ ಕೂಲಿ ಸಿಕ್ಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಅಭಿಪ್ರಾಯದ ಮಾತು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಪ್ರಶ್ನೆಯ (ಡಿ) ಭಾಗಕ್ಕೆ ಉತ್ತರವಾಗಿ ಹಣವನ್ನು ಒದಗಿಸಿಲ್ಲ ಎಂದು ಹೇಳಿದ ಮೇಲೆ ಇದಕ್ಕೆ ಬೇಕಾದ ದುಡ್ಡು ಯಾವ ಹೆಡ್ಡಿನಿಂದ ಖರ್ಚಾಗುತ್ತಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೈನರ್ ಇರಿಗೇಷನ್ ಸ್ಕೀಮ್ ಫಂಡಿನಿಂದ ಖರ್ಚಾಗುತ್ತಿದೆ.

Sri J. B. MALLARADHYA.—May I presume that the Hon'ble Minister has not got sufficient information on this subject?

Sri H. K. VEERANNA GOWDH.—Not that. Lately we have sanctioned certain amount for minor works, perhaps this new item might have been taken under that head. I have no exact information.

Sri J. B. MALLARADHYA.—If that admission is made we have no other question to put.

ಶ್ರೀ ಬಿ. ರಾಚಯ್ಯ.—ಈ ಎಸ್ಟಿಮೇಟನ್ನು ನೂಪ ರಿಂಚೆಂಡಿಂಗ್ ಇಂಜಿನಿಯರ್ ನ್ಯಾಂಕ್ಷನ್ ಮಾಡು ತ್ತಾರೆಯೇ?

Sri H. K. VEERANNA GOWDH.—It depends upon the amount that is estimated.

ಶ್ರೀ ಬಿ. ರಾಚಯ್ಯ.—11,950 ರೂಪಾಯಿಗಳನ್ನು ಎಸ್ಟಿಮೇಟ್ ಮಾಡಿದ್ದಾರೆಂದು ಹೇಳಲಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಮೇಲೆ ಹೇಳಿದ ಅರ್ಥದಲ್ಲಿ ನೋಡಿದರೆ ಗೊತ್ತಾಗುತ್ತದೆ.

Sri C. J. MUCKANNAPPA.—Before I put the question, I want to have some clarification from the Hon'ble Chief Minister.

Mr. DEPUTY SPEAKER.—The Hon'ble Member must put the question first.

Sri C. J. MUCKANNAPPA.—Yes.

Cases of misappropriation reported in several Multi-purpose Co-operative Societies in Tumkur District.

Q.—772. **Sri C. J. MUCKANNAPPA** (Gubbi).—

Will the Government be pleased to state:—

(*a*) the number of cases of misappropriation reported in the several Multi-purpose Co-operative Societies in the Tumkur District for the last three years;

(*b*) what is the total amount involved (information may be furnished talukwar);

(*c*) the number of cases in which prosecution has been ordered;

(*d*) out of them the number of cases against the Presidents, Secretaries and Clerks;

(*e*) the number of cases in which prosecution has been ordered to be withdrawn together with reasons thereof;

(*f*) the names of persons in respect of whom prosecution orders are withdrawn?

A.—**Sri S. NIJALINGAPPA** (Chief Minister).—

(*a*) 16.

(*b*) Statement 'A' showing the total amount involved (talukwar) is appended below.

(*c*) 12.

(*d*) 2 against Presidents,
7 against Secretaries,
3 against other employees including Clerks.

(*e*) In three cases the prosecutions have been ordered to be withdrawn.

(*f*) A list of names is appended below (statement 'B').

STATEMENT—"A"

	Taluk		*Amount*
			Rs.
1.	Turuvekere	...	8,374
2.	Sira ...	...	6,980
3.	Koratagere	...	1,485
4.	Chiknayakanahalli	...	183
5.	Kunigal	...	1,659

STATEMENT—"B"

1. Sri C. P. Hanumanthaiah, Ex-Secretary of the Akkirampura Circle Multi-purpose Co-operative Society.
2. Sri G. N. Krishnamurthy, Ex-Secretary of the Koratagere Kasaba Multi-purpose Co-operative Society.
3. Sri Thimmaiah, Ex-Secretary of the Yediyur Circle Multi-purpose Co-operative Society.

Sri C. J. MUCKANNAPPA.—My question was a different one altogether. But the Speaker very rigidly applied Rule 27 and he has just modified the whole thing. I wanted information about Multi-purpose Societies' Appropriation for the entire State for